

# ಮೊಗೆದಷ್ಟೂ ನೀರೇ ನೀರು

ಸಂಸಾರವೆಂಬ ಹೆಣವು ಬಿದ್ದಿರೆ

ತಿನಬಂದ ನಾಯ ಜಗಳವ ನೋಡಿರೆ

ನಾಯಜಗಳವ ನೋಡಿ ಹೆಣನೆದ್ದು ನಗುತಿರೆ

ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೆ!

– ಅಲ್ಲಮಪ್ರಭು

ಟಪ್ ಟಪ್ ಟಪ್ ಟಪ್ ಟಪ್ ಟಪ್..

ಹನಿಗಳು ಉದುರತೊಡಗಿ, ನಿಧಾನಕ್ಕೆ ಮೋಡ ಕಪ್ಪಾಗಿ ದಟ್ಟೈಸತೊಡಗಿತು.

ಬಿರುಬಿಸಿಲ ಈ ಬಿಸಿಲೂರನ್ನು ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಕರೆದರೆ ಅತಿಶಯೋಕ್ತಿಯೇನಾಗಲಿಕ್ಕಿಲ್ಲ. ಆಡಿನಮರಿ ನುಂಗಿದ ಆಯಾಸದಲ್ಲಿ ಸಂತೃಪ್ತಿ ಮತ್ತು ಉದಾಸೀನಗಳು ಬೆರೆತಂತೆ ಬಿದ್ದುಕೊಂಡಿರುವ ಹೆಬ್ಬಾವಿನಂತೆ ಈ ಪ್ರದೇಶದಲ್ಲಿ ರಣಬಿಸಿಲೆಂಬುದು ಸದಾ ಮೈಚಾಚಿ ಮಲಗಿಕೊಂಡಿರುತ್ತದೆ. ಈ ಬಿಸಿಲ ತೀವ್ರತೆಯನ್ನು ದುಪ್ಪಟ್ಟುಗೊಳಿಸುವಂತೆ ಸುತ್ತ ಕೋಟೆಯೋಪಾದಿಯಲ್ಲಿ ಗುಡ್ಡಗಳು ಆವರಿಸಿಕೊಂಡು ಮಹಾಮೌನ ನಟಿಸುತ್ತ ನಿಂತಿವೆ. ವರ್ಷವನ್ನು